ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Monday, the 20th March 1978/Phalguna 29, 1899 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair.]

Hunger strike by the employees of the Public Libraries Department

ಶ್ರೀ ಮಳ್ಳೂರು ಆನಂದರಾವ್(ರಾಜಾಜಿನಗರ).— ಮಾನ್ಯ ಸಭಾಧ್ಯಕ್ಷರೇ, ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಗುವುದಕ್ಕೆ ಮುಂಚಿನದು ಶೂನ್ಯವೇಳೆ ಎಂದು ಕಾಣುತ್ತದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಅತಿಮುಖ್ಯವಾದ ಒಂದು ವಿಚಾರವನ್ನು ತಮ್ಮಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮ ವಿಧಾನಸೌಧದ ಮುಂದಿರುವ ಕಬ್ಬನ್ ಪಾರ್ಕ್‌ನ ಮೂಲೆಯಲ್ಲಿ ಕಳೆದ ಜನವರಿ ೨೬ ರಿಂದಲೂ ಗ್ರಂಥಾಲಯದ ನೌಕರರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಇಲ್ಲಿಗೆ ಸುಮಾರು ೧ ತಿಂಗಳು ೨೨ ದಿವಸವಾಗಿದೆ. ಅವರನ್ನು ಕೇಳುವವರು ಯಾರೂ ಇಲ್ಲವಾಗಿದೆ, ಸರ್ಕಾರದವರೂ ಕೂಡ ಅವರ ಕಡೆ ತಮ್ಮ ಲಕ್ಷ್ಯವನ್ನು ಕೊಟ್ಟಿಲ್ಲ. ಇದರ ಬಗ್ಗೆ ನಾವು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿಕೊಟ್ಟಿದ್ದೇವೆ. ಇದರ ಬಗ್ಗೆ ಸರ್ಕಾರದವರು ಒಂದು ಮಾಹಿತಿಯನ್ನು ತರಿಸಿ ಈ ಸದನಕ್ಕೆ ಒಂದು ಹೇಳಿಕೆಯನ್ನು ಕೊಡಬೇಕೆಂದು ಸಂಬಂಧಪಟ್ಟ ಸಚಿವರಾದ ಶ್ರೀಮಾನ್ ಸುಬ್ಬಯ್ಯಶೆಟ್ಟಿ ಅವರನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈ ವಿಷಯದಲ್ಲಿ ಆದಷ್ಟು ಜಾಗ್ರತೆ ಮಾನ್ಯ ಎದ್ಯಾ ಸಚಿವರು ಮಾಹಿತಿ ತರಿಸಿ ಕೊಳ್ಳುತ್ತಾರೆ.

Taking up some calling attention notices

ಶ್ರೀ ಕೆ. ಯೆಂಕಟಪ್ಪ —ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಈಗ್ಗೆ ೬ ದಿವಸಗಳ ಹಿಂದೆಯೇ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ ಅದು ಏನಾಯಿತು ಎಂಬುದನ್ನು ತಿಳಿಸುತ್ತೀರಾ ಸ್ವಾಮಿ ?

MR. SPEAKER.—I will look into the matter.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ಕುಡಿಯುವ ನೀರಿನ ಬಗ್ಗೆ ನಾನೂ ಕೂಡ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳುಹಿಸಿದ್ದೇನೆ, ಅದು ಏನಾಯಿತು ಎಂಬುದನ್ನು ತಿಳಿಸುತ್ತಿರಾ ?

MR. SPEAKER.—I will look into the matter.

PAPERS LAID ON THE TABLE OF THE HOUSE

SRI B. BASAVALINGAPPA (Minister for Revenue).— I beg to lay :

(i) Notification No. RDM 39 TRM 76 dated 1st February 1978

(ii) Notification No. RD 86 EST 74 dated 1st/6th February 1978 as required by Section 194 of the Karnataka Land Revenue Act, 1964.

(iii) Notification No. RD 35 EST 77 dated 10th February, 1978 regarding remission of duties chargeable under the Karnataka Stamp Act 1957 in respect of deeds executed by persons eligible for loan or assistance under differential rate of interest approved by Government of India.

MR. SPEAKER.—The Papers are laid on the Table.

Karnataka Rent Control (Amendment) Bill, 1978

Introduction

SRI B. BASAVALINGAPPA (Minister for Revenue).—I beg to move:

"That leave be granted to introduce the Karnataka Rent Control (Amendment) Bill, 1978.

MR. SPEAKER.— The question is :

"That leave be granted to introduce the Karnataka Rent Control (Amendment) Bill, 1978.

The motion was adopted and leave was granted

SRI B. BASAVALINGAPPA (Minister for Revenue)—I beg to introduce

"The Karnataka Rent Control (Amendment) Bill, 1978."

MR. SPEAKER.– The Bill is introduced. **

Notice of an Adjournment Motion :

Re : affairs of the final M. A. Economics Students of the Bangalore University and the alleged mal-practices.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಸ್ವಾಮಿ, ಬೆಂಗಳೂರು ಯೂನಿವರ್ಸಿಟಿ ಸಿಂಡಿಕೇಟ್ ಮತ್ತು ಆಕೆಡೆಮಿಕ್ ಕೌನ್ಸಿಲ್‌ನ ತೀರ್ಮಾನದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ನಾನು ಕಳುಹಿಸಿದ್ದೆ. ಅದು ಏನಾಯಿತು ಎಂಬುದನ್ನು ತಿಳಿಸುತ್ತೀರಾ ?

ಮಾನ್ಯ ಅಧ್ಯಕ್ಷರೇ, ನಾನು ಕಳುಹಿಸಿರುವ ನಿಲುವಳಿ ಸೂಚನೆ ಬಹಳ ಮುಖ್ಯವಾದುದು. ಏಕೆಂದರೆ ಬೆಂಗಳೂರು ಯೂನಿವರ್ಸಿಟಿಯ ಫೈನಲ ಎಂ.ಎ., (ಎಕನಾಮಿಕ್ಸ್) ವಿಷಯದಲ್ಲಿ ನಡೆದಿದ್ದ ಮಾಲ್ ಪ್ರಾಕ್ಟೀಸ್ ಆರೋಪಕ್ಕೆ ಒಳಗಾಗಿದ್ದ ೭ ಜನ ವಿದ್ಯಾರ್ಥಿಗಳ ವಿರುದ್ಧ ಎಕ್ಸ್‌ಪರ್ಟ್ಸ್ ಕಮಿಟಿ ಯವರು ಕೊಟ್ಟಿದ್ದ ವರದಿಯನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನವರು ವಿರೋಧಿಸಿದ್ದರಿಂದ ಅಲ್ಲಿನ ಪರಿಸ್ಥಿತಿ ಬಹಳ ಪ್ರಕ್ಷುಬ್ಧವಾಗಿದೆ. ಈಗ ಪರೀಕ್ಷೆ ಹತ್ತಿರ ಬರುತ್ತಿದೆ, ವಿದ್ಯಾರ್ಥಿಗಳಲ್ಲೂ ಕೂಡ ಜಿಜ್ಞಾಸೆ

---

* * Bill appended as annexure to this volume.